ಆಟ ಆಡಿ ಸಾಕಷ್ಟು ದುಡ್ಡು ಕಳೆದು, ಊರಿನಲ್ಲಿ ಜೂಜಿಗೆ ತನ್ನ ಅಪ್ಪನ ಆಪ್ತರ ಬಳಿ ಸಾಲ ಮಾಡಿ, ಕೊನೆಗೆ ಸಾಲ ಕೊಟ್ಟವರ ವಸೂಲಿಯ ತಡೆಯಲಾರದೆ ಊರು ಬಿಟ್ಟಿದ್ದ. ಊರಿನ ಅಂಗಡಿಯಲ್ಲಿ ಅಪ್ಪನ ಹೆಸರು ಹೇಳಿ ಕುಡಿದು ಕುಡಿದು ಸಾಲ ಮಾಡಿ ಹೋಗಿದ್ದ. ಹೊಸ ಮನೆ ಕೆಲಸ ಅಲ್ಲಿಗೇ ನಿಂತು ಹೋಗಿತ್ತು. ಕೆಲಸಗಾರರಿಗೆ ಮಗ ಕೂಲಿ ಕೊಡದೆ ಅವರು ಅರ್ಧಕ್ಕೇ ಕೆಲಸ ನಿಲ್ಲಿಸಿ ಬೇರೆ ಕಡೆ ಹೊರಟು ಹೋಗಿದ್ದರು. ಇದನ್ನೆಲ್ಲಾ ನೋಡಿ ರಾಮನಿಗೆ ತಲೆ ಕೆಟ್ಟುಹೋಗಿ, ಅಸ್ವಸ್ಥನಾಗಿ ಗೆಳೆಯ ಶಿವನ ಮನೆಯ ಕಡೆಗೆ ಧಾವಿಸಿದ.

ಶಿವನ ಮನೆಗೆ ರಾಮ ಬಂದಾಗ ಅಲ್ಲಿ ಶಾಂತಿ, ನೆಮ್ಮದಿ, ಸಂತೋಷ ನೆಲೆಸಿರುವುದನ್ನು ಕಂಡು ತನಗೆ ಆ ನೆಮ್ಮದಿ ಸಿಗಲಿಲ್ಲವಲ್ಲ ಅಂದುಕೊಂಡನು. ರಾಮ ಬಂದಾಗ ಮನೆಯಲ್ಲಿ ಶಿವ ನಾಟ್ಯ ನಟರಾಜನ ವಿಗ್ರಹದ ಕೆತ್ತನೆಯಲ್ಲಿ ಮಗ್ನನಾಗಿದ್ದ. ಅವನ ಕೈಚಳಕ ಹಾಗೂ ಮಿರುಗುವ ಅವನ ಬೋಳುತಲೆ ಕಂಡು ರಾಮ ಬೆರಗಾದ. ತಾನು ಹಿಂದೆ ಕಾಶಿಯ ವಿಶ್ವನಾಥನ ಗುಡಿಯಲ್ಲಿ ನೋಡಿದಾಗ ಶಿವ ಹೇಗಿದ್ದನೋ ಹಾಗೇ ಈಗಲೂ ಅವನ ಬೋಳುತಲೆ ಥಳಥಳ ಹೊಳೆಯುತ್ತಿರುವುದನ್ನು ಗುರುತಿಸಿದ! ಆದರೆ ರಾಮ ಆ ವಿಷಯವನ್ನು ಆತನ ಬಳಿ ಪ್ರಸ್ತಾಪಿಸಲು ಹೋಗಲಿಲ್ಲ.



ಅಲ್ಲಿ ತನ್ನ ಮಗನನ್ನು ನೋಡಿದೆ ಎಂಬುದನ್ನೂ ಆತ ಹೇಳಲಿಲ್ಲ. ಅಷ್ಟೊತ್ತಿಗೆ ಶಿವನ ಸೊಸೆ ರಾಮನಿಗೆ ಹಾಲು ತಂದುಕೊಟ್ಟು ಅವನ ಕಾಶಿಯಾತ್ರೆಯ ಅನುಭವಗಳನ್ನು ವಿಚಾರಿಸಿ ಹೋದಳು. ಶಿವನ ಮಗನೂ ಬಂದು ರಾಮನ ಯೋಗಕ್ಷೇಮವನ್ನು ವಿಚಾರಿಸಿದ. ಆಗ ರಾಮನನ್ನು ಶಿವ 'ನೀನು ಕಾಶಿಗೆ ಸುಖವಾಗಿ ಹೋಗಿ ಬಂದಾ?' ಎಂದು ಕೇಳಿದ. 'ಹೋಗಿ ಬಂದೆ. ಗಂಗಾನದಿಯಿಂದ ಗಂಗಾಜಲ, ಪ್ರಸಾದ ತಂದಿದ್ದೇನೆ, ತಗೋ. ಆದರೆ ನನ್ನ ಹರಕೆಯನ್ನು ಆ ವಿಶ್ವನಾಥ ಸ್ವೀಕರಿಸಿದನೋ ಇಲ್ಲವೋ ಗೊತ್ತಾಗಲಿಲ್ಲ!' ಎಂದ. ಶಿವ, 'ಕಾಶಿ ವಿಶ್ವನಾಥ ದೊಡ್ಡವನು! ನಿನ್ನ ಹರಕೆಯನ್ನು ಖಂಡಿತವಾಗಿಯೂ ಸ್ವೀಕರಿಸಿರುತ್ತಾನೆ. ನಿನಗ್ಯಾಕೆ ಅವ್ನ ಮೇಲೆ ಅಷ್ಟು ಅನುಮಾನ? ಬಾ!' ಅಂದನು.

ರಾಮ, 'ನಾನು ಕಾಶಿಯಿಂದ ಹಿಂತಿರುಗಿ ಬರುವಾಗ ನೀನು ಹಿಂದೆ ನೀರು ಕುಡಿಯಲು ಹೋಗಿ ಉಳಿದಿದ್ದಲ್ಲ, ಆ ಗುಡಿಸಲಿಗೆ ನಾನೂ ಹೋಗಿ ಒಂದು ರಾತ್ರಿ ಉಳಿದಿದ್ದೆ. ಆ ವೃದ್ಧ ದಂಪತಿಗಳು ಚೆನ್ನಾಗಿದ್ದಾರೆ. ಅವರು ನನ್ನನ್ನೂ ಚೆನ್ನಾಗಿ ಉಪಚರಿಸಿದರು' ಎಂದ. ಆಗ ಶಿವ 'ಅದೂ ದೇವರ ಸೇವೆಯೇ ಅಲ್ಲವೆ ರಾಮಾ?' ಎಂದರೂ, ಆ ಗುಡಿಸಿಲಿನಲ್ಲಿ ತಾನು ನಿಂತು ಮಾಡಿ ಬಂದ ತನ್ನ ಸೇವೆಯನ್ನು ಹೇಳಿಕೊಳ್ಳಲು ಹೋಗಲಿಲ್ಲ.

'ಒಳಗೆ ಬಾ, ನಿನಗಾಗಿ ಒಂದು ನಟರಾಜನ ಕಲಾಕೃತಿಯನ್ನು ಕೆತ್ತನೆ ಮಾಡಿ ಇಟ್ಟಿದ್ದೇನೆ. 'ಇದು ಈಚೆಗೆ ನನ್ನ ಕೈಯಲ್ಲಿ ಅದ್ಭುತವಾಗಿ ಮೂಡಿ ಬಂದಿರುವ ನಾಟ್ಯ ನಟರಾಜ. ಆದರೆ ಇದನ್ನು ಬೇರೆಯವರಿಗೆ ಮಾರಲು ನನಗೆ ಇಷ್ಟವಾಗಲಿಲ್ಲ. ಅನೇಕರು ಬಂದು ತಮಗೆ ಕೊಡು ಅಂಥ ದುಂಬಾಲು ಬಿದ್ದು ಕೇಳಿದರು. ನೀನು ಕೇಳಿದಷ್ಟು ಹಣ ಕೊಡ್ತೀವಿ ಅಂದರು. ಆದರೆ ನಾನು ಇದನ್ನು ಯಾರಿಗೂ ಮಾರಲಿಲ್ಲ. ನೀನು ಬರಲಿ, ಬಂದ ಮೇಲೆ ನಿನಗೇ ಇದನ್ನು ಕೊಡುವ ಅಂಥ ಕಾಯ್ದಿರಿಸಿದ್ದೆ' ಎನ್ನುತ್ತಾ ಶಿವ ತನ್ನ ಜೊತೆಗಾರ ರಾಮನನ್ನು ತಮ್ಮ 'ದೇವರ ಮನೆ'ಗೆ ಕರೆದೊಯ್ದನು. ಅಲ್ಲಿ ರಾಮ ಆ ನಟರಾಜನ ಪ್ರತಿಮೆಯನ್ನು ನೋಡಿ ಮೂರ್ಛೆಗೊಂಡವನಂತೆ ಕಂಡನು. ಆ ಪ್ರತಿಮೆಯಿಂದ ಕಾಶಿ ವಿಶ್ವನಾಥನೇ, ಕಾಶಿಯ ಆದಿಭೈರವನೇ ನೃತ್ಯ ಮಾಡುತ್ತಾ ಎದ್ದು ಬಂದಂತೆ ಅವನಿಗೆ ಭಾಸವಾಯಿತು. ಆಗ ಶಿವ ತಾನು ಮಾಡಿದ ನೃತ್ಯ ನಟರಾಜನ ಕಲಾಕೃತಿಯನ್ನು ದೇವರ ಸನ್ನಿಧಿಯಿಂದ ಎತ್ತಿ ರಾಮನ ಕೈಗೆ ಇಡುತ್ತಾ, 'ಇದನ್ನು ನೀನು ನಿನ್ನ ಹೊಸ ಮನೆಯಲ್ಲಿ ಸರಿಯಾದ ಜಾಗದಲ್ಲಿ ಇಡು. ಇದರಿಂದ ನಿನಗೆ, ನಿನ್ನ ಕುಟುಂಬಕ್ಕೆ ಖಂಡಿತವಾಗಿ ಒಳ್ಳೆಯದಾಗುತ್ತದೆ. ಹೋಗಿರುವ ನಿನ್ನ ಮಕ್ಕಳೂ ಸುಖವಾಗಿ ಹಿಂತಿರುಗಿ ಬರುತ್ತಾರೆ' ಎನ್ನುತ್ತಾ ಅವನಿಗೆ ಒಪ್ಪಿಸಿದನು. ರಾಮ ನಾಟ್ಯ ನಟರಾಜನನ್ನು ತನ್ನ ಕಣ್ಣುಗಳಿಗೆ ಒತ್ತಿಕೊಳ್ಳುತ್ತಾ ಮೈಮರೆತನು.

ಪ್ರೇರಣೆ: ಲಿಯೋ ಟಾಲ್‌ಸ್ಟಾಯ್ ಅವರ ಒಂದು ಕಥೆ ●